# ಕ್ರೀಡೆ ಮತ್ತು ಉದ್ದೀಪನ ಮದ್ದು

ಕ್ರೀಡೆಯ ಸ್ವರೂಪಕ್ಕೆ ತಕ್ಕಂತೆ ದೇಹ ಮನಸ್ಸುಗಳ ಸಮನ್ವಯ ಸಾಧಿಸುವ ಪ್ರಾಯೋಗಿಕ ತರಬೇತಿಗೆ ಕೋಚ್‌ಗಳೆಂಬ ಮಾರ್ಗದರ್ಶಿಗಳು ರೂಪುಗೊಂಡಿದ್ದಾರೆ. ಅವರಲ್ಲಿ ವೃತ್ತಿಪರತೆ ತರುವ ಪ್ರಯತ್ನಗಳು ನಡೆದಿವೆ. ಎಲ್ಲದರಲ್ಲೂ ಯಶಸ್ಸು ಗಳಿಸುವುದೇ ಪರಮಗುರಿಯಾಗಿರುವ ಕಾರಣ ಗೆಲ್ಲುವುದು ಮತ್ತು ಗೆಲ್ಲಿಸುವುದಕ್ಕಾಗಿ ಅಡ್ಡದಾರಿಗಳ ಅನ್ವೇಷಣೆಗಳೂ ನಡೆಯುತ್ತಿವೆ. ಇದನ್ನು ಅಳವಡಿಸಿಕೊಳ್ಳುವುದರಲ್ಲಿ ಕೋಚ್‌ಗಳೆಂಬ 'ಆಧುನಿಕ ದ್ರೋಣಾಚಾರ್ಯರು' ಹಿಂದೆ ಬಿದ್ದಿಲ್ಲವೆಂಬುದು ಉದ್ದೀಪನ ಮದ್ದು ಸೇವನೆಯ ಪ್ರಕರಣಗಳಲ್ಲಿ ಬಯಲಿಗೆ ಬರುತ್ತಿದೆ.



ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರಿ ಮುಂದಿನ ವರ್ಷದ ಲಂಡನ್ ಒಲಿಂಪಿಕ್ಸ್‌ನಲ್ಲಿ ದೇಶಕ್ಕೆ ಪದಕಗಳ ಭರವಸೆ ಮೂಡಿಸಿದ್ದ ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆಯ ಪರೀಕ್ಷೆಗಳಲ್ಲಿ ಸಿಕ್ಕಿಬಿದ್ದು ಅಪಮಾನಿತರಾಗಿದ್ದಾರೆ. ಇನ್ನೊಂದು ಪರೀಕ್ಷೆಯಲ್ಲಿ ಅವರ ಉದ್ದೀಪನ ಮದ್ದು ಸೇವನೆ ದೃಢಪಟ್ಟರೆ ಅವರಲ್ಲಿ ಕೆಲವರು ಕ್ರೀಡಾರಂಗದಿಂದಲೇ ಗಡೀಪಾರಾಗುವುದು ನಿಶ್ಚಿತ. ಅಪಮಾನಕರವಾಗಿ ನೇಪಥ್ಯಕ್ಕೆ ಸರಿದುಹೋಗುವ ಅಪಾಯದಲ್ಲಿ ರಾಜ್ಯದ 'ಚಿನ್ನದ ಹುಡುಗಿ' ಅಶ್ವಿನಿ ಅಕ್ಕುಂಜಿ ಕೂಡಾ ಇರುವುದು ಬೇಸರದ ಸಂಗತಿ. ಹಳ್ಳಿಗಾಡಿನಿಂದ ಬಂದ ಈ ಹುಡುಗಿ ತೆರೆಯ ಮರೆಯಲ್ಲಿ ಸಾಧನೆ ಮಾಡುತ್ತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆಲ್ಲುವ ಮೂಲಕ ಗಮನ ಸೆಳೆದಾಗ ಅಭಿಮಾನ ಪಟ್ಟವರೆಲ್ಲ ಉದ್ದೀಪನ ಮದ್ದಿನ ಆಮಿಷದ ಬಲೆಗೆ ಸಿಲುಕಿದ ಅವಸ್ಥೆಗೆ ಮರುಕ ಪಡುವಂತಾಗಿದೆ.

ಇಂಥ ಪರಿಸ್ಥಿತಿಗೆ ಕ್ರೀಡಾಪಟುಗಳ ಯಶಸ್ಸಿನ ಹಂಬಲವೊಂದೇ ಕಾರಣವೆಂದು ಹೇಳಲಾಗದು. ಜೊತೆಗೆ ಅವರಿಗೆ ಮಾರ್ಗದರ್ಶನ ಮಾಡುವ ತರಬೇತುದಾರರು ಮತ್ತು ಕ್ರೀಡಾ ಅಧಿಕಾರಿಗಳು ಪಾತ್ರವೂ ಇರುವುದನ್ನು ಅಲ್ಲಗಳೆಯಲಾಗದು. ಏಷ್ಯನ್ ಕ್ರೀಡಾಕೂಟ, ಕಾಮನ್ವೆಲ್ತ್ ಕ್ರೀಡಾಕೂಟಗಳಲ್ಲಿನ ಈ ಕ್ರೀಡಾಪಟುಗಳ ಸಾಧನೆ ಕಡಿಮೆಯದಲ್ಲ. ಆದರೆ ವಿಶ್ವಮಟ್ಟದ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ಪಡೆಯುವ ಅವಕಾಶ ಯಾವುದೇ ಕ್ರೀಡಾಪಟು ಕಾಣುವ ಅತ್ಯುನ್ನತ ಕನಸು. ಅದು ಸತತ ಪರಿಶ್ರಮದಿಂದ ಬರಬೇಕೆಂಬುದು ಆದರ್ಶ. ಕ್ರೀಡೆಯಲ್ಲಿ ಸಾಧಿಸುವ ಯಶಸ್ಸನ್ನು ಹಣ, ಖ್ಯಾತಿ, ಪ್ರತಿಷ್ಠೆಗಳು ಹಿಂಬಾಲಿಸಿ ಬರುವುದರಿಂದ ಯಶಸ್ಸನ್ನು ಪಡೆಯುವುದೇ ಪರಮ ಗುರಿಯಾಗುತ್ತದೆ. ಅದರ ಪರಿಣಾಮ ಕ್ರೀಡಾಪಟುಗಳ ಸಾಮರ್ಥ್ಯವನ್ನು ಕೃತಕವಾಗಿ ಹೆಚ್ಚಿಸುವ ನಾನಾ ಬಗೆಯ ತಂತ್ರ. ವೈಯಕ್ತಿಕ ಸಾಧನೆಯಿಂದ ಉನ್ನತ ಗುರಿ ಸಾಧಿಸುವ ಆದರ್ಶ, ಹೇಗಾದರೂ ಗುರಿ ಮುಟ್ಟುವ ಅಡ್ಡದಾರಿಯಿಂದ ಕ್ರೀಡೆಯ ಆಶಯಕ್ಕೆ ಧಕ್ಕೆ ಬರುತ್ತಿದೆ. ಇದು ಜಾಗತಿಕ ವಿದ್ಯಮಾನ ಕೂಡಾ ಆಗಿರುವುದು ಕ್ರೀಡಾ ಕ್ಷೇತ್ರದ ದುರಂತ.

ಚದುರಂಗದಂತಹ ಕೆಲವೇ ಕ್ರೀಡೆಗಳನ್ನು ಹೊರತು ಪಡಿಸಿದರೆ ಉಳಿದೆಲ್ಲ ಕ್ರೀಡೆಗಳಿಗೂ ದೈಹಿಕ ಸಾಮರ್ಥ್ಯವೇ ಮುಖ್ಯ. ದೇಹವನ್ನು ಕ್ರೀಡೆಯ ಅವಶ್ಯಕತೆಗೆ ತಕ್ಕಂತೆ ಒಗ್ಗಿಸಿಕೊಳ್ಳುವ, ಸ್ಪರ್ಧೆಯ ತುರಿಯಾವಸ್ಥೆಯವರೆಗೂ ಆಂತರಿಕ ಶಕ್ತಿ ಕಾಯ್ದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಕ್ರೀಡಾಪಟು ಗಳಿಸಿಕೊಳ್ಳದೆ ಯಶಸ್ಸನ್ನು ನಿರೀಕ್ಷಿಸುವಂತಿಲ್ಲ. ಕ್ರೀಡೆಗಳು ಗಳಿಸುತ್ತಿರುವ ಜನಪ್ರಿಯತೆ, ಅದನ್ನು ಹಿಂಬಾಲಿಸಿ ಬರುತ್ತಿರುವ ವ್ಯಾಪಾರಿ ಆಸಕ್ತಿಗಳಿಗೆ ಅನುಗುಣವಾಗಿ ಆಟಗಾರರನ್ನು ಕೇಂದ್ರವಾಗಿರಿಸಿಕೊಂಡ ವೈದ್ಯಕೀಯ ಸಂಶೋಧನೆಗಳು ಉದ್ಯಮದಂತೆ ಬೆಳೆದಿವೆ. ಕ್ರೀಡೆಯ ಸ್ವರೂಪಕ್ಕೆ ತಕ್ಕಂತೆ ದೇಹ ಮನಸ್ಸುಗಳ ಸಮನ್ವಯ ಸಾಧಿಸುವ ಪ್ರಾಯೋಗಿಕ ತರಬೇತಿಗೆ ಕೋಚ್‌ಗಳೆಂಬ ಮಾರ್ಗದರ್ಶಿಗಳು ರೂಪುಗೊಂಡಿದ್ದಾರೆ. ಅವರಲ್ಲಿ ವೃತ್ತಿಪರತೆ ತರುವ ಪ್ರಯತ್ನಗಳು ನಡೆದಿವೆ. ಎಲ್ಲದರಲ್ಲೂ ಯಶಸ್ಸು ಗಳಿಸುವುದೇ ಪರಮಗುರಿಯಾಗಿರುವ ಕಾರಣ ಗೆಲ್ಲುವುದು ಮತ್ತು ಗೆಲ್ಲಿಸುವುದಕ್ಕಾಗಿ ಅಡ್ಡದಾರಿಗಳ ಅನ್ವೇಷಣೆಗಳೂ ನಡೆಯುತ್ತಿವೆ. ಇದನ್ನು ಅಳವಡಿಸಿಕೊಳ್ಳುವುದರಲ್ಲಿ ಕೋಚ್‌ಗಳೆಂಬ 'ಆಧುನಿಕ ದ್ರೋಣಾಚಾರ್ಯರು' ಹಿಂದೆ ಬಿದ್ದಿಲ್ಲವೆಂಬುದು ಉದ್ದೀಪನ ಮದ್ದು ಸೇವನೆಯ ಪ್ರಕರಣಗಳಲ್ಲಿ ಬಯಲಿಗೆ ಬರುತ್ತಿದೆ.

ಏನೇ ಇರಲಿ, ಯಶಸ್ಸಿನ ಬೆಂಬತ್ತಿ ಬರುವ ಹಣ ಮತ್ತು ಖ್ಯಾತಿಯನ್ನು ಮುಂದಿನ ಸಾಧನೆಗೆ ಉತ್ತೇಜನಕಾರಿ ಎಂದು ತಿಳಿದು ಸಾಧನೆಯನ್ನು ಮುಂದುವರಿಸುವುದು ಈಗಿನ ಕ್ರೀಡಾಪಟುಗಳ ಆದರ್ಶವಾಗಬೇಕು. ಆದರೆ ಯಶಸ್ಸಿನ ಬೆಂಬತ್ತಲು ಅಡ್ಡ ದಾರಿ ಹಿಡಿಯುವುದು ಕೆಲವೊಮ್ಮೆ ಫಲ ನೀಡಿದರೂ ಅದು ಹೆಚ್ಚು ಕಾಲ ಉಳಿಯದು ಎಂಬುದು ಈಚಿನ ಅನೇಕ ವಿದ್ಯಮಾನಗಳಲ್ಲಿ ಬಯಲಾಗಿದೆ. ಕ್ರೀಡಾ ಕ್ಷೇತ್ರದಲ್ಲಿ ವ್ಯಕ್ತಿಯ ವೈಯಕ್ತಿಕ ಸಾಧನೆಯನ್ನು ಸ್ವಂತದ್ದೆಂಬಷ್ಟು ಅಭಿಮಾನದಿಂದ ಸಂತೋಷ ಅನುಭವಿಸುವ ಶ್ರೀಸಾಮಾನ್ಯರು ಅವರಲ್ಲಿ ತಮ್ಮ ಆರಾಧ್ಯ ದೈವಗಳನ್ನು ಕಾಣುವಷ್ಟು ಉದಾರಿಗಳು. ಆದರೆ ವ್ಯಕ್ತಿಯ ಸಾಧನೆ ಅಪಮಾರ್ಗದಿಂದ ಬಂದದ್ದೆಂದು ಗೊತ್ತಾದರೆ ನಿರ್ದಾಕ್ಷಿಣ್ಯವಾಗಿ ಹೀಗಳೆಯಲು ಹಿಂಜರಿಯುವುದಿಲ್ಲ. ಇದು ಕ್ರೀಡಾಪಟುಗಳ ಯಶಸ್ಸಿನ ಬೆಳಕಿನಲ್ಲಿ ತಮ್ಮ ಉತ್ಪಾದನೆಗಳನ್ನು ಬೆಳಗಿಸಲು ಯತ್ನಿಸುವ ಉದ್ಯಮಗಳಲ್ಲಿಯೂ ಕಂಡುಬರುವ ವ್ಯಾಪಾರಿ ತಂತ್ರ. ಇಂತಹ ಪರಿಸ್ಥಿತಿಯಲ್ಲಿ ಯಶಸ್ಸಿನ ಬೆನ್ನು ಹತ್ತಿ ಶಕ್ತಿವರ್ಧಕಗಳ ಸೇವನೆಯ ನೆಪದಲ್ಲಿ ಉದ್ದೀಪನ ಮೋಹಕ ಜಾಲಕ್ಕೆ ಸಿಲುಕಿ ಹಳ್ಳಿಯ ಪ್ರತಿಭೆಗಳು ಮೂಲೆ ಸೇರುವಂತಾಗುವುದು ವಿಷಾದಕರ.

■ ಲಕ್ಷ್ಮಣ ಕೊಡಸೆ